ಶ್ರೀಮತಿ ಟಿ. ಭಾಗೀರಥಿ ಮರುಳಸಿದ್ದನಗೌಡ: ಈ ಉತ್ತರವನ್ನು ನಾನು ಎರಡು ವರ್ಷಗಳಿಂದಲೂ ಕೂಡ ಕೇಳುತ್ತಿದ್ದೇನೆ. ಈಗ ಆ ಕಟ್ಟಡಗಳ ಗತಿ ಏನು? ಕಿಟಕಿ ಹಾಗೂ ಬಾಗಿಲುಗಳನ್ನು ಇಟ್ಟಾಗಿದೆ. ಸಿಮೆಂಟ್ ರೇಟ್ ಏರುತ್ತಿದೆ, ಇದನ್ನು ಯಾವಾಗ ಮುಗಿಸುವುದಕ್ಕೆ ಸಾಧ್ಯತೆ ಇದೆ? ಕೊನೆಗೆ ನಮ್ಮ ಗ್ರಾಂಟ್ಸ್‌ನಲ್ಲಿ ಯಾರಾದರೂ ಹಾಕಿ maching grant ಎಂದು ಮಾಡಲಿಕ್ಕೂ ಕೂಡ ಸಾಧ್ಯತೆ ಇಲ್ಲ. ಅದಕ್ಕೆ ತಾವು ಅರ್ಧ ಹಣವನ್ನು ಬಿಡುಗಡೆ ಮಾಡಿಬಿಟ್ಟಿದ್ದೀರಿ. ದಯಮಾಡಿ ಅದಕ್ಕೆ ಆದಷ್ಟು ಬೇಗ ಇದೇ ವರ್ಷದಲ್ಲಿ ಈ ಸಂದರ್ಭದಲ್ಲಿ ಬೇಡಿಕೆಯ ಮಂಡನೆಯಾಗುತ್ತದೆ ಈ ಸಂದರ್ಭದಲ್ಲಿ ಮಾಡಿಕೊಡಬೇಕೆಂಬ ಒತ್ತಾಯವನ್ನು ಮಾಡುತ್ತೇನೆ.

ಡಾ: ವಿ.ಎಸ್. ಆಚಾರ್ಯ: ಆ ಬಗ್ಗೆ ಖಂಡಿತವಾಗಿ ಕಡತದಲ್ಲಿ ಬೇಕಾಗಿರುವಂತಹ ಸೂಚನೆಯನ್ನು ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ: 198 (1505)

ಅಧ್ಯಕ್ಷರು: ಸಿದ್ದು ಸವದಿಯವರೆ ನಿಮ್ಮ ಪ್ರಶ್ನೆ ಸಮಾಜಕಲ್ಯಾಣ ಇಲಾಖೆಯಿಂದ ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾವಣೆಯಾಗಿದೆ.

ಶ್ರೀ ಸಿದ್ದು ಸವದಿ: ಅದು ಸಮಾಜ ಕಲ್ಯಾಣ ಇಲಾಖೆ ಬರುತ್ತದೆ ಸಾರ್.

ಅಧ್ಯಕ್ಷರು: ಅದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

ಬೆಂಗಳೂರು ಮಹಾನಗರದಲ್ಲಿ ಆಟೋರಿಕ್ಷಾ ಪರ್ಮಿಟ್ ಕುರಿತು

1338 ಶ್ರೀ ಸೀತಾರಾಂ ಎಂ.ಆರ್. (ಮಲ್ಲೇಶ್ವರಂ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ 2005–06 ಹಾಗೂ 2006–07 ಸಾಲಿನಲ್ಲಿ ದೇವರಾಜ ಅರಸ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ ಅರ್ಹ ಫಲಾನುಭವಿಗಳಿಗೆ ಆಟೋರಿಕ್ಷಾ ಪರ್ಮಿಟ್‌ಗಳಿಗೆ ತಡೆಯಾಜ್ಞೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ತಡೆಯಾಜ್ಞೆ ತೆರವುಗೊಳಿಸಲು ಸರಕಾರ ತೆಗೆದುಕೊಂಡಿರುವ ಕ್ರಮಗಳೇನು;

(ಇ) ದೇವರಾಜ ಅರಸ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಮಗದ ವತಿಯಿಂದ ಅರ್ಹ ಫಲಾನುಭವಿಗಳಿಗೆ ಆಟೋರಿಕ್ಷಾ ಸಾಲ ಸೌಲಭ್ಯಗಳನ್ನು ಯಾವಾಗ ವಿತರಿಸಲು ಪ್ರಾರಂಭಿಸಲಾಗುವುದು?

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು)

(ಅ) ತಡೆಯಾಜ್ಞೆ ಬಂದಿರುವುದಿಲ್ಲ. 2005–06ನೇ ಸಾಲಿನಲ್ಲಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಮಗೆ ಹಾಗೂ ಕರ್ನಾಟಕ ಅಲ್ಪಸಂಖ್ಯಾತರ ನಿಗಮಕ್ಕೆ 500 ಆಟೋ ರಿಕ್ಷಾಗಳಿಗೆ ಪರ್ಮಿಟ್‌ಗಳನ್ನು ಹಂಚಿಕೆ ಮಾಡಲಾಗಿದೆ. ಆದರೆ, ಕರ್ನಾಟಕ ರಾಜ್ಯ ಸಾರಿಗೆ ಮೇಲ್ಮನವಿ ನ್ಯಾಯಾಧಿಕರಣವು ಅರ್ಜಿಸಂಖ್ಯೆ 918 ರಿಂದ 922/2006ರ ಮೇಲೆ ದಿನಾಂಕ: 10.07.2006ರಂದು ನೀಡಿರುವ ತೀರ್ಪಿನಲ್ಲಿ ಮೋಟಾರು ವಾಹನಗಳ ಕಾಯ್ದೆ ಕಲಂ 74ರಡಿಯಲ್ಲಿ ಕಾಂಟ್ರಾಕ್ಟ್ ಕ್ಯಾರೇಜ್ ರಹದಾರಿಗಳನ್ನು ನಿರ್ದಿಷ್ಟ ನಿಗಮಗಳಿಗೆ ಮಿಸಲಿಡಲು ಅವಕಾಶವಿಲ್ಲವೆಂದು ಆದೇಶ ನೀಡಿದ್ದರಿಂದ 2006–07ನೇ ಸಾಲಿನಲ್ಲಿ ದೇವರಾಜ ಅರಸು ಅಭಿವೃದ್ಧಿ ನಿಗಮದ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಫಲಾನುಭವಿಗಳಿಗೆ ಆಟೋ ರಿಕ್ಷಾ ರಹದಾರಿಗಳ ಹಂಚಿಕೆ ಮಾಡಿರುವುದಿಲ್ಲ.

(ಆ) ಮೇಲ್ಮನವಿ ನ್ಯಾಯಾಧಿಕರಣದ ತೀರ್ಪನ್ನು ಕೂಲಂಕಷವಾಗಿ ಪರಿಶೀಲಿಸಿ ಸದರಿ ತೀರ್ಪಿನ ವಿರುದ್ಧ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಸಂಖ್ಯೆ: 8140/2007ರ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ನೋಂದಣಿ ಮಾಡಿಕೊಂಡಿದ್ದು, ನ್ಯಾಯಾಲಯದ ತೀರ್ಪನ್ನು ನಿರೀಕ್ಷಿಸಲಾಗಿದೆ.

(ಇ) ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ವಿಲೇವಾರಿ ಆದನಂತರ ನ್ಯಾಯಾಲಯ ನೀಡುವ ತೀರ್ಪಿನ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಂ.ಆರ್ ಸೀತಾರಾಂ: ಮಾನ್ಯ ಅಧ್ಯಕ್ಷರೆ, ಇವರು ಉತ್ತರದಲ್ಲಿ ಕಳೆದ ವರ್ಷ 2006ನೇ ಇಸವಿ ಜುಲೈ 10ನೇ ತಾರೀಖಿನಲ್ಲಿ Transport Appelate Tribunalನಲ್ಲಿ ಆಗಿರುವಂತಹ ಆದೇಶಕ್ಕೆ ಸರ್ಕಾರ ಒಂದು ವರ್ಷದ ನಂತರ ಈಗ ಹೈಕೋರ್ಟಿಗೆ ಒಂದು ಮನವಿಯನ್ನು ಸಲ್ಲಿಸಿದೆ. ಅದು ಅಡ್ಮಿಟ್ ಆಗಿದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಇವತ್ತಿನ Times of India ದಲ್ಲಿ Chief Justice ರವರು ಒಂದು statemetnನ್ನು ಕೊಟ್ಟಿದ್ದಾರೆ. "Courts cannot scrutinize polity-

Says Chief Justice. In a significant verdict, the High Court has ruled that courts cannot supervice or scrutinize implementation of a policy. It is for the Government to lay down the policy and implement ಈ ತರಹ ಕೋರ್ಟಿನ ಒಂದು ಅನಿಸಿಕೆಯೇ ಈ ತರಹ ಇರಬೇಕಾದರೆ ಸರ್ಕಾರ ಹೈಕೋರ್ಟಿನಲ್ಲಿ ಅದಷ್ಟು ಬೇಗ Advocate General ರವರನ್ನು personal ಆಗಿ ಕರೆದು ಇದನ್ನು monitor ಮಾಡಿ ಕೂಡಲೇ ಇದನ್ನು tribunal court ಕೊಟ್ಟಿರುವಂತಹ ಆದೇಶವನ್ನು ರದ್ದುಪಡಿಸಬೇಕು ಅಥವಾ ಇದನ್ನು ಮಾಡಬೇಕೆಂದು ಕೋರಿಕೊಳ್ಳುತ್ತಾ ಬೆಂಗಳೂರು ನಗರದಲ್ಲಿ ಎರಡು ವರ್ಷಗಳಾಯಿತು. Unemployment ಹೆಚ್ಚಾಗುತ್ತಿದೆ. ಯುವಕರಿಗೆ ಸರ್ಕಾರ ಇಷ್ಟೊಂದು ನಿಗದಿಪಡಿಸಿದ್ದರೂ ಸಹ ಇದನ್ನು ಯುವಕರಿಗೆ ಉಪಯೋಗ ಮಾಡುವುದಕ್ಕಾಗುತ್ತಿಲ್ಲ. ಅದಷ್ಟು ಬೇಗ ತಾವು ಮಾಡಬೇಕು. SC/ST Development corporation ಹಾಗೂ Backward Development Corporation ನಲ್ಲಿ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಿದ್ದಾರೆ. ಆದರೆ Karnakata Minority Development Corporation ನಲ್ಲಿ ಈ ಯೂನಿಯನ್‌ದು ಅದು ಇದು ಎಂದು ಸಿಂಡಿಕೇಟ್ ಮಾಡಿಕೊಂಡು totally ಫಲಾನುಭವಿಗಳಿಗೆ ಇದರ ದುಡ್ಡು ಮುಟ್ಟುವುದಿಲ್ಲ. ಅದರಿಂದಾಗಿ ಯಾವುದೇ ಕಾರ್ಯಕ್ರಮಗಳು ಸಹ ಮುಟ್ಟುತ್ತಿಲ್ಲ. ಅದನ್ನು ಸಹ ನೀವು ಲಾಟರಿ ಮೂಲಕ ಮಾಡಬೇಕೆಂದು ಅಧ್ಯಕ್ಷರ ಮೂಲಕ ತಮಗೆ ಮನವಿಯನ್ನು ಮಾಡುತ್ತೇನೆ. ಇದರಲ್ಲಿ ತಾವು ಭರವಸೆಯನ್ನು ಕೊಡುತ್ತೀರೆಂದು ನಾನು ಕಾಯುತ್ತಿದ್ದೇನೆ.

ಶ್ರೀ ಬಾಲಚಂದ್ರ ಲ ಜಾರಕಿಹೊಳಿ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಸೀತಾರಾಂ ರವರು ಇದರ ಬಗ್ಗೆ ಈಗಾಗಲೇ ಗಮನಕ್ಕೆ ತಂದಿದ್ದಾರೆ. ಏಕೆಂದರೆ ನಾನು ಈಗಾಗಲೇ ಕರ್ನಾಟಕ ರಸ್ತೆ ಸಾರಿಗೆ tribunalನವರು ಏನು order ಮಾಡಿದ್ದಾರೆ,ಅದರ ಬಗ್ಗೆ ನಾವು ಈಗಾಗಲೇ High Court ನಲ್ಲಿ appeal ಮಾಡಿದ್ದು ಅದು admit ಸಹ ಆಗಿದೆ. ಅದರ ಬಗ್ಗೆ ತಾವು ಹೇಳಿರುವಂತಹ pointನ್ನು ನಾವು clear ಮಾಡಿದ್ದೇವೆ. ಇದರ ಬಗ್ಗೆ ನಾವು advocate General ರವರ ಜೊತೆ ಚರ್ಚೆ ಮಾಡಿ ಅತೀ ಶೀಘ್ರದಲ್ಲಿಯೇ ಅವರಿಂದ ಆದೇಶವನ್ನು ತೆಗೆದುಕೊಂಡು application withdraw ಮಾಡಿಕೊಂಡು ನಾವು auto permit ಹಂಚುವ ಬಗ್ಗೆ ವ್ಯವಸ್ಥೆ ಮಾಡುತ್ತೇವೆ. ಇದರ ಜೊತೆಗೆ ತಾವು ಏನು minorities ಹೇಳಿ ನನ್ನ ಗಮನಕ್ಕೆ ತಂದಿದ್ದೀರಿ. ಅದರ ಬಗ್ಗೆ ಅಲ್ಪಸಂಖ್ಯಾತರ ಸಚಿವರು

ನಿರ್ವಹಣೆಯನ್ನು ಮಾಡುತ್ತಾರೆ, ಅವರ ಜೊತೆಯಲ್ಲಿ ಚರ್ಚೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಆರ್. ಸೀತಾರಾಂ: ನಾನು ತಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ, ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಮತ್ತು ನಮ್ಮ ದೇವರಾಜು ಅರಸುರವರ ಅಭಿವೃದ್ಧಿ ನಿಮಗದಲ್ಲಿ ನಡೆಯುತ್ತಿರುವ ಲಾಟರಿ ಸಿಸ್ಟಮ್ ಇದರಲ್ಲಿ ಎಲ್ಲಾ ಫಲಾನುಭವಿಗಳಿಗೆ without any discrimination ಮುಟ್ಟುತ್ತಿದೆ. Minority Development Corporation ನಲ್ಲಿ ಆಗುತ್ತಿಲ್ಲ. ಅದನ್ನು ಏತಕ್ಕಾಗಿ ಸರ್ಕಾರ ಮಾಡುತ್ತಿಲ್ಲವೆಂಬುದರದ ಬಗ್ಗೆ ಇದನ್ನು ಕೂಡಲೇ transparent ಆಗಿ ಇಡುವುದಕ್ಕೆ immediate ಆಗಿ ಲಾಟರಿ ಮೂಲಕವಾಗಿ ಮಾಡುವುದು ಒಳ್ಳೆಯದು ಎಂದು ಏಕೆಂದರೆ ಈ ಒಂದು tribunal ಗೆ ಕೆಲವು ಜನರು ಹೋಗಿದ್ದಾರೆ. ಇದನ್ನು ತಾವು ಗಮನಿಸಿದರೆ ಇವರೆಲ್ಲ appellants. ಒಬ್ಬ ಅಮಾನುಲ್ಲಾ ಖಾನ್, ಒಬ್ಬ ವೇಣುಗೋಪಾಲ್, ಒಬ್ಬ ಮಹೇಶ್, ಸದಾಶಿವ, ರಂಗನಾಥ್ ಇವರೆಲ್ಲರಿಗೂ ಸಹ ಒಬ್ಬರೇ ಅಡ್ವೋಕೇಟ್, ಅವರು Sri. C.V. Kumar, Advocate. Minority Development Corporation ನಲ್ಲಿ ಈ ರೀತಿಯಾಗಿ manipulative ಕೆಲಸಗಳು ನಡೆಯುತ್ತಿದೆ. ಅದಕ್ಕಾಗಿ ತಾವು ಕೂಡಲೇ ಇದನ್ನು ಈ ಎರಡು ನಿಗಮಗಳಲ್ಲಿ ಯಾವ ರೀತಿಯಾಗಿ ಸರ್ಕಾರ transparent ಆಗಿ ಕೆಲಸ ಮಾಡುತ್ತಿದೆ ಎಂದು ನೋಡಬೇಕು. Minority Development Corporation ನಲ್ಲಿ ಇದು ನಡೆಯುತ್ತಿಲ್ಲ. ಇದರಿಂದಾಗಿ ಬಹಳ ಜನರು ವಂಚಿತರಾಗುತ್ತಿದ್ದಾರೆ. ಯುನಿಯನ್‌ನಲ್ಲಿ ಎಲ್ಲರೂ ಮಾಫಿಯ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಅಧಿಕಾರಿಗಳು ಸಹ ಟೈಟ್ ಮಾಡಬೇಕಾಗುತ್ತದೆ. ಇಲ್ಲದೇ ಇದ್ದರೆ ಯಾವುದೇ ಸರ್ಕಾರಗಳು ಬರಲಿ, I think, ಈ ಸರ್ಕಾರ 100 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದರಲ್ಲಿ 25–30 ಕೋಟಿ ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ 10 ಕೋಟಿ ರೂಪಾಯಿಗಳು ಫಲಾನುಭವಿಗಳಿಗೆ ಮುಟ್ಟುತ್ತಿಲ್ಲ. ನಾನು ಶಾಸಕನಾಗಿ ನನ್ನ 8 ವರ್ಷದ ಅನುಭವದಲ್ಲಿ Minority Development Corporationನಲ್ಲಿ ಈ ಲಾಟರಿಯನ್ನು ತರುವ ಮೂಲಕ transparency ತನ್ನಿ ಎಂದು ಮಾನ್ಯ ಅಧ್ಯಕ್ಷರ ಮೂಲಕ ನಾನು ತಮ್ಮಲ್ಲಿ request ಮಾಡಿಕೊಳ್ಳುತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಅಲ್ಪ ಸಂಖ್ಯಾತರ ಇಲಾಖೆಯಲ್ಲಿ ಮಾನ್ಯ ಸ್ನೇಹಿತರು ಹೇಳಿದ ಪ್ರಕಾರ ಬಹಳಷ್ಟು ಬೆಂಗಳೂರಿನಲ್ಲಿ ಸುಮಾರು 4–5 ವರ್ಷಗಳ ಹಿಂದೆ ದೊಡ್ಡ

ದೊಡ್ಡ scandalಗಳು ನಡೆಯುತ್ತಿದೆ ಎಂದು ಆಟೋರಿಕ್ಷಾಗಳನ್ನು ಕೊಡುವುದನ್ನು ಬಂದ್ ಮಾಡಿದ್ದಾರೆ. ಇಲ್ಲಿ ಬುಕ್ಕಿಗಳು ಬಹಳ ಜನರು ಇದ್ದಾರೆ. ಆಟೋವನ್ನು ತೆಗದುಕೊಳ್ಳುವವರು ಕಡಿಮೆ ಜನರು ಇದ್ದಾರೆ. ನಮಗೆ NMDFC ಯಿಂದ ಕೇಂದ್ರದಿಂದ ಬರತಕ್ಕಂತಹ ಹಣದಿಂದ ನಾವು Direct loan ಎಂದು ಹೇಳಿ ಆಟೋಗಳನ್ನು ಕೊಡುತ್ತಿದ್ದೆವು. ಅದು ಬಂದ್ ಆಗಿದೆ. ಈಗ ಕರ್ನಾಟಕ ಸರ್ಕಾರದ್ದು ಏನು ಎಂದರೆ ಈ ಸ್ವಾವಲಂಬನ Margin Money ಏನು ಇದೆ ಅದರಿಂದ ನಾವು 25 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. 5 ಸಾವಿರ ರೂಪಾಯಿಗಳ ಸಹಾಯ ಧನವನ್ನು ನೀಡಲಾಗುತ್ತಿದೆ. ಉಳಿಕೆಯದು ಬ್ಯಾಂಕುಗಳು ಹಾಕುತ್ತವೆ. ನಾವು ಲಾಟರಿ ಮೂಲಕ ತೆಗೆದುಕೊಳ್ಳುವ ಬದಲಾಗಿ ಅದನ್ನು ನಾವು ಬ್ಯಾಂಕಿಗೆ ಕಳುಹಿಸಿಬಿಡುತ್ತೇವೆ. ಎಷ್ಟು ಫಲಾನುಭವಿಗಳು ಬರಲಿ ಬ್ಯಾಂಕ್ ಮುಖಾಂತರ ಕೊಡುತ್ತಾರೆ. ಅಕಸ್ಮಾತ್ ನಾವು ಎಲ್ಲವನ್ನು ಹಾಜರುಪಡಿಸುವುದಾದರೆ ಆಗ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಲಾಟರಿ ಮುಖಾಂತರ ತೆಗೆದುಕೊಂಡರೆ ಒಳ್ಳೆಯದು. ಅರ್ಜಿಗಳೂ ಎಷ್ಟು ಸ್ವೀಕೃತವಾಗಲಿ, ನಾವು ಬ್ಯಾಂಕಿಗೆ ಕಳುಹಿಸಿಬಿಡುತ್ತೇವೆ. ನಾವು KMDC ಯಿಂದ ಅವರಿಗೆ ಒಂದು margin money ಕೊಡುತ್ತೇವೆ. 5 ಸಾವಿರ ರೂಗಳ ಸಹಾಯಧನವನ್ನು ಕೊಡುತ್ತೇವೆ. ಎಷ್ಟು ಫಲಾನುಭವಿಗಳು ಇರುತ್ತಾರೋ ಅಷ್ಟು ಜನರಿಗೆ ಕೊಡುತ್ತೇವೆ. ಲಾಟರಿಯಿಂದ ಎತ್ತುವಂತಹ ಅವಶ್ಯಕತೆ ಇರುವುದಿಲ್ಲ. But, ಪ್ರತ್ಯೇಕವಾಗಿ ಬೆಂಗಳೂರಿಗೆ ನಾವು ಏತಕ್ಕಾಗಿ ಬಂದ್ ಮಾಡಿದ್ದೇವೆಂದರೆ ಸುಮಾರು 5-6 ವರ್ಷಗಳ ಹಿಂದೆ ಇಲ್ಲಿ scandal ನಡೆಯಿತು, NMFDCಯವರು ಸಹಿತ ಈ ಹಣವನ್ನು ಕೊಡುವ ಕಾಲಕ್ಕೆ ಕಂಡೀಷನ್ ಮಾಡಿದರು. ಬೆಂಗಳೂರು ನಗರವನ್ನು ಹೊರತುಪಡಿಸಿ ಇಡೀ ಕರ್ನಾಟಕದ ಬೇರೆ ಕಡೆಯಲ್ಲಿ ಕೊಡಬಹುದು ಎಂದು ಹೇಳಿದೆವು. ಇದುವರೆಗೂ ಅಲ್ಪಸಂಖ್ಯಾತರ ಇಲಾಖೆಯಿಂದ ಆಟೋರಿಕ್ಷಾಗಳನ್ನು ಬೆಂಗಳೂರು ನಗರಕ್ಕೆ ವಿತರಣೆ ಮಾಡಲೇ ಇಲ್ಲ.

ಶ್ರೀ ಎಂ.ಆರ್. ಸೀತಾರಾಂ: ಆಟೋರಿಕ್ಷಾಗಳನ್ನು ಬೆಂಗಳೂರು ನಗರದಲ್ಲಿ ಏತಕ್ಕಾಗಿ ಕೊಡಲಿಲ್ಲವೆಂಬ ಬಗ್ಗೆ ನನ್ನ ಮುಖ್ಯ ಪ್ರಶ್ನೆಯಾಗಿದೆ. ಅದರಲ್ಲಿ ಪರ್ಮಿಟ್ ಸೇರಿದೆ. ಪರ್ಮಿಟ್ ಕೊಡದೇ ಇರುವ ಬಗ್ಗೆಯೇ ಸಮಸ್ಯೆಯೂ ಉದ್ಭವವಾಗಿರುವುದು. Minority Development Corporationನಲ್ಲಿ ಯಾರೇ ಮಾಡಲಿ transparent ಆಗಿ ಏಕೆ ಮಾಡುತ್ತಿಲ್ಲವೆಂಬ ನನ್ನ ಪ್ರಶ್ನೆಯಾಗಿದೆ. ಡಾ॥ ಅಂಬೇಡ್ಕರ್‌ರವರ ಅಭಿವೃದ್ಧಿ ನಿಗಮದಲ್ಲಿ ಶ್ರೀ ಡಿ. ದೇವರಾಜ

ಅರಸುರವರ ಅಭಿವೃದ್ಧಿ ನಿಗಮದಲ್ಲಿ transparancy ನಡೆಯುತ್ತಿದೆ. ಏತಕ್ಕಾಗಿ Minority Development Corporation ಮಾಡುವುದಕ್ಕಾಗುತ್ತಿಲ್ಲ? ಸನ್ಮಾನ್ಯ ಮಂತ್ರಿಗಳು ನೀವು ಬ್ಯಾಂಕಿಗೆ direct ಆಗಿ ಕಳುಹಿಸುತ್ತೀರೆಂದು ಹೇಳುತ್ತಿದ್ದೀರಲ್ಲಾ, ಇದೇ ಒಂದು ಕಾರ್ಯಕ್ರಮ ಸಮಾಜ ಕಲ್ಯಾಣ ಇಲಾಖೆಯಿಂದ Minority Development Corporation ಗೆ ಹಣ ಬರುತ್ತಿದೆ. Unemployed Youthಗೆ ಆಟೋಗಳನ್ನು ಕೊಳ್ಳಲು ಬರುತ್ತಿದೆ, ಅವರಿಗೆ ಪರ್ಮಿಟ್ ಕೊಟ್ಟರೆ ಏತಕ್ಕಾಗಿ ಲಾಟರಿ ಮೂಲಕ ಕೊಡಬಾರದು? Definitely, ಲಾಟರಿ ಮೂಲಕ ಕೊಡುವುದಕ್ಕೆ ಸಾಧ್ಯತೆ ಇದೆ. ನಾನು ನನ್ನ ಅನುಭವದಿಂದ ಅಲ್ಲಿ ನಡೆಯುತ್ತಿರುವ ಬಗ್ಗೆ ಹೇಳುತ್ತಿದ್ದೇನೆ. ಮಂತ್ರಿಗಳೇ ಇದನ್ನು ಇಷ್ಟು ಸಮರ್ಥಿಸಿಕೊಂಡರೆ ಇನ್ನು ಆ ಜನಗಳನ್ನು ಕಾಪಾಡುವವರು ಯಾರು? ಬೆಂಗಳೂರಿನಲ್ಲಿ ನಿಮ್ಮ ಕಲ್ಪನೆಯ ಪ್ರಕಾರ ಯಾರು ಆಟೋರಿಕ್ಷಾಗಳನ್ನು ಓಡಿಸುವವರು ಇಲ್ಲವೆಂದು ಹೇಳಬೇಡಿ. ನನ್ನ ಕ್ಷೇತ್ರದಲ್ಲಿ ನಿಮಗೆ 150 ಜನರ ಹೆಸರನ್ನು ಕೊಡುತ್ತೇನೆ. ಇದರ ಬಗ್ಗೆ ಸನ್ಮಾನ್ಯ ಸಚಿವರಲ್ಲಿ ತಪ್ಪು ಭಾವನೆ ಇದೆ. ದಯವಿಟ್ಟು transparency ಮಾಡುವುದರಿಂದ ಯಾರಿಗಾದರೂ ಲುಕ್ಸಾನ್ ಇಲ್ಲ.

ಶ್ರೀ ಇಕ್ಬಾಲ್ ಅನ್ಸಾರಿ: ಬೆಂಗಳೂರಿನಲ್ಲಿ ಆಟೋ ಓಡಿಸುವವರು ಇಲ್ಲವೆಂದು ನಾನು ಹೇಳಲಿಲ್ಲ. ಇರಬಹುದು, ಈಗಾಗಲೇ ಪರ್ಮಿಟ್ ಏತಕ್ಕಾಗಿ ಕೊಟ್ಟಿಲ್ಲವೆಂದರೆ ಅದರ ಬಗ್ಗೆ ಸಾರಿಗೆ ಇಲಾಖೆಯವರು ಇದನ್ನ ಬಂದ್ ಮಾಡಿದ್ದಾರೆ. ಹೆಚ್ಚಿಗೆ ಆಟೋಗಳು ಇವೆ ಎಂದು ಅವರು ನಿಯಮವನ್ನು ಇಟ್ಟುಕೊಂಡು ಮಾಡಿದ್ದಾರೆ. ಲಾಟರಿ ಮೂಲಕ ಮಾಡಬೇಕೆಂದು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ನಾನು ಆ ಬಗ್ಗೆ ಉದಾಹರಣೆಯನ್ನು ಹೇಳಿದ್ದೇನೆ. ಏನು ನಮ್ಮ SC:STಇಲಾಖೆ, ದೇವರಾಜ ಅರಸು ನಿಗಮದವರು ಮಾಡುತ್ತಿದ್ದಾರೆ. ಅಲ್ಲಿ ಏನಾಗುತ್ತಿದೆ ಎಂದರೆ ಬಲ್ಕ್ ಆಗಿ ಸುಮಾರು ಹೆಚ್ಚಿಗೆ ಸುಮಾರು 4 ಸಾವಿರ ಕೋಟಿ ರೂಪಾಯಿಗಳ ಹಣ ಇದೆ, ಅಲ್ಲಿ ಹೆಚ್ಚಾಗಿ ಬರುತ್ತದೆ ಅದಕ್ಕಾಗಿ ಲಾಟರಿ ಸಿಸ್ಟಮ್ ಮಾಡಿದ್ದಾರೆ. ನಮ್ಮ ಹತ್ತಿರ 100 ಕೋಟಿ ರೂಪಾಯಿಗಳು ಇರುತ್ತದೆ. ಆ 100 ಕೋಟಿ ರೂಪಾಯಿಗಳಲ್ಲಿ KMDCಯಿಂದ ಬರುವುದು 48 ಕೋಟಿ ರೂಪಾಯಿಗಳು, ಆ 48 ಕೋಟಿ ರೂಪಾಯಿಗಳಲ್ಲಿ ಸಾಲವನ್ನು ನಾವು margin moneyಯಿಂದ ಕೊಡಬೇಕಾಗಿರುತ್ತದೆ. ಕೇಂದ್ರದಿಂದ ಈ ವರ್ಷ ಹಣ ಬರಲಿಲ್ಲ. ಸಾಲ ಮನ್ನಾವನ್ನು margin moneyಯಿಂದ ಕೊಡುವಂತಹ ಕಾಲಕ್ಕೆ ನಮ್ಮ ಹತ್ತಿರ 50 ಆಟೋಗಳಿಗೆ

ಬಂದರೆ, ನಾವು 50 ಆಟೋಗಳ ಬಗ್ಗೆಯೂ ಆಯ್ಕೆ ಮಾಡಿ ಕೂಡ ಬ್ಯಾಂಕಿಂಗ್ ಕೊಡುತ್ತೇವೆ. ಅಲ್ಲಿ ಲಾಟರಿಯಿಂದ ಎತ್ತುವಂತಹ ಸಮಸ್ಯೆಯೇ ಬರುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಧ್ರುವನಾರಾಯಣ್‌ರವರೆ ಪ್ರಶ್ನೆಯನ್ನು ಕೇಳಿ.

ಶ್ರೀ ಎಂ.ಆರ್. ಸೀತಾರಾಂ: ಮಾನ್ಯ ಅಧ್ಯಕ್ಷರೆ,.... ಒಂದು ನಿಮಿಷ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಆಯಿತು. ಬಹಳಷ್ಟು ಸಮಯವನ್ನು ತಮಗೆ ಕೊಟ್ಟಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ.ಆರ್. ಸೀತಾರಾಂ: ಅವರು ಉಪಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವುದಿಲ್ಲ.

ಅಧ್ಯಕ್ಷರು: ತಾವು ಇನ್ನೆಷ್ಟು ಪ್ರಶ್ನೆಗಳನ್ನು ಕೇಳುತ್ತೀರಿ?

ಶ್ರೀ ಎಂ.ಆರ್. ಸೀತಾರಾಂ: ತಾವು ಏನು ಹೇಳುತ್ತೀರೆಂದರೆ, ನನ್ನ ಮೈನ್ ಪ್ರಶ್ನೆ ಇರುವುದೇ ಪರ್ಮಿಟ್‌ದು. ಬೆಂಗಳೂರು ನಗರದಲ್ಲಿ 100 ಅಥವಾ 200 ಪರ್ಮಿಟ್ ಬರಲಿ, ನಾನು ರಾಜ್ಯದಲ್ಲಿ ಮಾಡಿ ಎಂದು ಹೇಳುತ್ತಿಲ್ಲ. ಬೆಂಗಳೂರಿನಲ್ಲಿ 100 ಪರ್ಮಿಟ್ ಬಂದರೆ ಅದನ್ನು ಲಾಟರಿ ಮೂಲಕ ಎತ್ತಿ ಫಲಾನುಭವಿಗಳಿಗೆ ಕೊಡುವುದಕ್ಕೆ ಏನು ತೊಂದರೆ ಎಂದು ನಾನು ಕೇಳುತ್ತಿರುವುದು? ಅದರ ಬಗ್ಗೆ ಏನು ಸಮಸ್ಯೆ ಎಂದು ತಾವು ಹೇಳಬೇಕು.

ಶ್ರೀ ಇಕ್ಬಾಲ್ ಅನ್ಸಾರಿ: ನಾನು ಪರ್ಮಿಟ್ ಬಂದಿಲ್ಲವೆಂದು ಹೇಳುತ್ತಿಲ್ಲ.

ಶ್ರೀ ಎಂ.ಆರ್. ಸೀತಾರಾಂ: ಪರ್ಮಿಟ್ ಈಗ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಇಕ್ಬಾಲ್ ಅನ್ಸಾರಿ: ಇದರ ಬಗ್ಗೆ ಅವರು ಗಮನವನ್ನು ಕೊಡುತ್ತಿಲ್ಲ. ಸಾರಿಗೆ ಇಲಾಖೆಯವರು ಪರ್ಮಿಟ್ ಕೊಡುವುದನ್ನು ಬಂದ್ ಮಾಡಿದ್ದಾರೆ.

ಅಧ್ಯಕ್ಷರು: ಮಾನ್ಯ ಸೀತಾರಾಂರವರೆ, ಇಲ್ಲಿ ಸಂಬಂಧಪಟ್ಟ ಸಾರಿಗೆ ಸಚಿವರು ಇಲ್ಲ, ಅವರು ಬಂದ್ ಮಾಡಿದ್ದಾರೆಂದು ಇವರು ಹೇಳುತ್ತಿದ್ದಾರೆ. ನೀವು ಅವರ ಹತ್ತಿರ ಮಾತನಾಡಿ ಅವರ problems ನ್ನು solve ಮಾಡಿಕೊಳ್ಳಬಹುದು. ನೀವು ಅವರ ಜೊತೆ ಮಾತನಾಡಿ ಬಗೆಹರಿಸಿಕೊಳ್ಳಿ.